ಶ್ರೀ ಹೆಚ್. ಡಿ ದೇವೇಗೌಡ.— ಸ್ವಾಮಿ, ಇಲ್ಲಿ ಎರಡು ಊರಿನವರಿಗೆ ಜಗಳ ಇದೆ. ಅದನ್ನು ಇವರು ಹೇಳೋವುದಿಲ್ಲ. ಇಲ್ಲಿ ಪ್ರಭಲವಾದ ಜಗಳ ಇದೆ. ಒಂದು ಊರಿನವರು ಕೆರೆಯನ್ನು ಒಡೆದು ಹಾಕಬೇಕು ಎಂದು ಹೇಳುತ್ತಾರೆ. ಮತ್ತೊಂದು ಊರಿನವರು ಕೆರೆಯನ್ನು ಒಡೆಯಂಕೂಡದೆಂದು ಹೇಳುತ್ತಾರೆ. ನಾನು ಎರಡು ಪಾರ್ಟಿಗಳನ್ನು ಕರೆಸಿ ವಿಚಾರ ಮಾಡಿದ್ದೇನೆ. ಗುಲ್ಬರ್ಗ, ಬೀದರ್, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳು ಈ ನಾಲ್ಕು ಜಿಲ್ಲೆಗಳಲ್ಲಿ ನೈಜಾಮರ ಕಾಲದಲ್ಲಿ ಕೆರೆಗಳನ್ನು ಕಟ್ಟಿಪ್ಪುದಕ್ಕೆ ಮೀಜೂರಾತಿ ಕೊಡತಕ್ಕಂಥ ಕಾಲದಲ್ಲಿ ಮುಳುಗಡೆಯಾಗತಕ್ಕಂಥ ಜಮೀನುಗಳಿಗೆ ಯಾವುದೇ ರೀತಿಯಾ ಪರಿಹಾರವನ್ನು ಕೊಟ್ಟಿಲ್ಲ ಈ ಒಂದು ಕೆರೆಗೆ ಕೊಡುತ್ತೇವೆಂದು ಒಪ್ಪಿಕೊಂಡರೆ ಎಷ್ಟು ಕೋಟಿ ಕೊಡಬೇಕಾಗುತ್ತದೋ ಗೊತಿಲ್ಲಾಗುವುದಿಲ್ಲ. ಈ ವಿಚಾರದಲ್ಲಿ ಪರಿಹಾರ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಈ ಮಾತನ್ನು ಮಾನ್ಯ ಕಂದಾಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಕೆರೆ ಒಡೆಯಂವುದಕ್ಕೂ ಸಾಧ್ಯವಿಲ್ಲ. ಕೋಡಿಯನ್ನು ಹಿಂದೆ ಎತ್ತರಿಸಿದ್ದಾರೆ. ಯಾವಾಗ ಕೋಡಿ ಎತ್ತರಿಸಿದರು ಎನ್ನುವ ಪೂರ್ಣ ಮಾಹಿತಿ ನನ್ನ ಮಂದೆ ಇಲ್ಲ. ಇದ್ದರೆ ಹೇಳುತ್ತಿದ್ದೆ. ಎರಡೂ ಗ್ರಾಮದವರನ್ನು ಳ-ಳ ಜನ ಕರೆಸಿ, ಆ ಭಾಗದ ಶಾಸಕರನ್ನು, ಅಧಿಕಾರಿಗಳನ್ನು ಕರೆಸಿ ನಿಮ್ಮ ಛೇಂಬರ್‌ನಲ್ಲಿಯೇ ಚರ್ಚೆ ಮಾಡೋಣ ಇದರಲ್ಲಿ ಒಂದು ಕಡೆ ಪಾರ್ಟಿ ಮಾಡಬೇಕಾಗಿಲ್ಲವೆಂದು ಹೇಳುತ್ತೇನೆ.

## ೨) ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾಲೇಜುಗಳನ್ನು ಪ್ರಾರಂಭಿಸಲು ಸಂಯೋಜನೆಯನ್ನು ನೀಡುವುದರ ಬಗ್ಗೆ

ಶ್ರೀ ಪಿ. ಎಸ್. ರಾಣೆ.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾಲೇಜುಗಳನ್ನು ಪ್ರಾರಂಭಿಸಲು ಸಂಯೋಜನೆಯನ್ನು ನೀಡುವ ಬಗ್ಗೆ ಉನ್ನತ ಶಿಕ್ಷಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.— ಸ್ವಾಮಿ, ಇದಕ್ಕೆ ಸ್ವಲ್ಪ ಕಾಲಾವಕಾಶ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನು ಸ್ವಾಮಿ ಇದು. ಕಾಲಿಂಗ್ ಅಟೆನ್‌ಷನ್ ಕೊಟ್ಟರೂ ಉತ್ತರ ಬರುವುದಿಲ್ಲ, ಪ್ರಶ್ನೆಗಳಿಗೂ ಉತ್ತರ ಬರುವುದಿಲ್ಲ. ಅಧ್ಯಕ್ಷರೆ, ಕಾಲಿಂಗ್ ಅಟೆನ್‌ಷನ್‌ಗೆ ರಿಪ್ಲೈ ಇರುವುದಿಲ್ಲ, ಪ್ರಶ್ನೆಗಳನ್ನು ಕೇಳಿದರೆ ಅದಕ್ಕೂ ರಿಪ್ಲೈ ಇರುವುದಿಲ್ಲ, ಕೆಲವೊಂದು ಪ್ರಶ್ನೆಗಳಿಗೆ ನಾವು ಉತ್ತರ ತರಿಸಿಕೊಂಡು ಹೇಳುತ್ತೇವೆಂದು ಹೇಳಿದರು. ಈ ರೀತಿ ಆದರೆ ಹೇಗೆ ?

ಅಧ್ಯಕ್ಷರು.— ಮಾನ್ಯ ಖರ್ಗೆಯವರೇ, ನಾನು ಉತ್ತರ ಕೊಡಿಸುತ್ತೇನೆ. ದಯವಮಾಡಿ ಕುಳಿತುಕೊಳ್ಳಬೇಕು. ಇವೊತ್ತು ೬ ಕಾಲಿಂಗ್ ಅಟೆನ್‌ಷನ್ ಹಾಕಿದ್ದೇವೆ, ದಯವಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉತ್ತರ ಇಲ್ಲದೆ, ೬ ಕಾಲಿಂಗ್ ಅಟೆನ್‌ಷನ್ ಹಾಕಿದರೆ ಏನು ಪ್ರಯೋಜನ ?

ಅಧ್ಯಕ್ಷರು.—ಇದಷ್ಟು ಪ್ರಯತ್ನ ಮಾಡಬೇಕೆನ್ನುವ ದೃಷ್ಟಿಯಿಂದ ಸರ್ಕಾರದವರು ಒಪ್ಪಿಕೊಂಡಿದ್ದಾರೆ, ಈಗ ಮಾನ್ಯ ಮಂತ್ರಿಗಳು ಬಂದರು ಅವರು ಉತ್ತರ ಹೇಳುತ್ತಾರೆ ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ನಮಗೆ ಡೈರೆಕ್ಷನ್ ಕೊಡಿ ಅವರ ಮನೆಗೆ ಹೋಗಿ ಉತ್ತರ ಕೇಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.— ಇವೊತ್ತು ೬ ಕಾಲಿಂಗ್ ಅಟೆನ್‌ಷನ್‌ಗೆ ಸರ್ಕಾರ ಉತ್ತರ ಕೊಡಲಿಕ್ಕೆ ಒಪ್ಪಿರುವುದರಿಂದ, ಈ ಸರ್ಕಾರಕ್ಕೆ ಒಂದು ಶಾಲಂ ಹೊದಿಸಿ ಸನ್ಮಾನ ಮಾಡೋಣವೇ ?

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಹುದು.

ಶ್ರೀ ಪಿ. ಎಸ್. ರಾಣೆ.— ಅಧ್ಯಕ್ಷರೆ, ಕರ್ನಾಟಕ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ನಾಲ್ಕು ಕಾಲೇಜುಗಳ ಸಂಯೋಜನೆಯ ಅನುಮತಿಯನ್ನು ಹಠಾತ್ತನೇ ಹಿಂತೆಗೆದುಕೊಂಡಿದ್ದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಅಧ್ಯಕ್ಷರೆ. ಸಂಬಂಧಪಟ್ಟ ವಿಚಾರ ನ್ಯಾಯಾಲಯದ ಮುಂದೆ ಇರುವುದರಿಂದ ಸೂಕ್ಷ್ಮ ವಿಚಾರಗಳು ಕೂಡ ಚರ್ಚೆಗೆ ಬರಬೇಕಾಗುತ್ತದೆ. ಇದಕ್ಕೊಸ್ಕರ ಸಮಯ ಕೇಳುತ್ತೇನೆ.

ಶ್ರೀ ಪಿ. ಎಸ್. ರಾಣೆ.— ಅಧ್ಯಕ್ಷರೆ, ೧೯೮೬-೮೭ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಲೋಕಲ್ ಕಮಿಟಿ ಅನಂತರ ಅಕಾಡಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ಇವು ಮೂರು ಒಪ್ಪಿ, ಕೆಲವು ಕಾಲೇಜುಗಳ ಸಂಯೋಜನೆಯನ್ನು ಮುಂಜೂರು ಮಾಡಬೇಕೆಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ನಂತರ ಸರ್ಕಾರವು ಅವುಗಳಿಗೆ ಒಪ್ಪಿಕೊಂಡು ೪-೧೧-೧೯೮೬ರಂದು ಅನುಮತಿ ನೀಡಿತು. ಅನಂತರ ಸರ್ಕಾರದ ಸಂತೋಷಲೆಯಲ್ಲಿ ವಿಶ್ವವಿದ್ಯಾನಿಲಯದ ಸಂತೋಷಲೆಯಲ್ಲಿ ಸ್ಪಷ್ಟವಾದಂಥ ಒಂದು ನಿರ್ದೇಶನ ಇದೆ. ಸರ್ಕಾರದ ಮುಂಜೂರಾತಿ ಪಡೆಯದೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದು ಎಂದು ಸ್ಪಷ್ಟವಾದ ಆದೇಶ ಇದೆ. ಅದೇ ಕಾರಣಕ್ಕಾಗಿ ೪-೧೧-೧೯೮೬ರಂದು ಸರ್ಕಾರ ಮುಂಜೂರಾತಿ ನೀಡಿತು. ಆ ಕಾಲಕ್ಕೆ ವಿದ್ಯಾರ್ಥಿಗಳು ಪ್ರವೇಶ ಪಡೆಯುವುದು ಸಾಧ್ಯವಾಗದೇ ಇರುವುದರಿಂದ ಈ ನಾಲ್ಕು ಕಾಲೇಜುಗಳು, ಬಿಜಾಪುರ, ತಿಕ್ಕೋಟಿ, ಧಾರವಾಡ, ಸದಾಶಿವಘಡ, ಈ ನಾಲ್ಕೂ ಕಾಲೇಜುಗಳವರು ೧೯೮೭-೮೮ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ವಿಶ್ವವಿದ್ಯಾನಿಲಯಕ್ಕೆ ಕೇಳಿದನಂತರ ವಿಶ್ವವಿದ್ಯಾನಿಲಯ ಅದಕ್ಕೆ ಅನುಮತಿ ನೀಡಿ ೧೯೮೭-೮೮ರಲ್ಲಿ ಪ್ರಾರಂಭಿಸಬೇಕೆಂದು ಆಜ್ಞಾಪಿಸಿ ಕೊಟ್ಟಿತು. ಆ ಪ್ರಕಾರ ಪತ್ರಿಕೆಗಳಲ್ಲಿ ಜಾಹಿರಾತು ನೀಡಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಶಿಕ್ಷಣ ಪ್ರಾರಂಭಿಸಿ ಕಾಲೇಜು ಪ್ರಾರಂಭಿಸಿದನಂತರ ಹಠತ್ತಾಗಿ ಜುಲೈ ತಿಂಗಳ ಕೊನೆಯಲ್ಲಿ ನಿಮಗೆ ಅನುಮತಿ ನೀಡಲಿಕ್ಕೆ ಆಗುವುದಿಲ್ಲ ಎಂದು ತಿಳಿಸಿದರೆ ಇದು ಯಾವ ನ್ಯಾಯ ಎಂದು ಕೇಳಬೇಕಾಗುತ್ತದೆ. ನಾನು ಇಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುವುದು ಏನೆಂದರೆ ಒಂದು ಸಲ ಅನುಮತಿ ನೀಡಿದ ನಂತರ ಅನುಮತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ತಮಗೆ ಏನಾದರೂ ವಿಶ್ವವಿದ್ಯಾನಿಲಯದ ಕಾನೂನು ಪ್ರಕಾರ ಅವಕಾಶ ಇದೆಯೇ? ಹಾಗೆ ಇಲ್ಲದೇ ಇರುವಾಗ ಈ ರೀತಿಯ ಆಜ್ಞೆ ಮಾಡಿರುವುದಕ್ಕೆ ಕಾರಣ ಏನು? ಅನಂತರ ಈಗ ತಾವು ನಾಲ್ಕು ಕಾಲೇಜುಗಳಿಗೆ ಸಂಯೋಜನೆ ನೀಡುವಾರದೆಂದು ಹೇಳಿ...

ಅಧ್ಯಕ್ಷರು.— ಮಾನ್ಯ ಸದಸ್ಯರು ವಿವರಣೆ ಕೇಳುತ್ತಿದ್ದಾರೋ ಅಥವಾ ಭಾಷಣ ಮಾಡುತ್ತಿದ್ದಾರೋ ಎನ್ನುವುದನ್ನು ವಿರೋಧಪಕ್ಷದ ನಾಯಕರಾದ ಶ್ರೀಮತಿ ನಾಗರತ್ನಮ್ಮನವರೇ ಹೇಳಬೇಕು. ಇಷ್ಟು ಉದ್ದಾದ್ದ ಭಾಷಣ ಮಾಡಿಕೊಂಡು ಹೋದರೆ ಹೇಗೆ.

ಶ್ರೀ ಪಿ. ಎಸ್. ರಾಣೆ.— ಅಧ್ಯಕ್ಷರೆ, ನೂರಾರು ಮಕ್ಕಳ ಭವಿಷ್ಯದ ಪ್ರಶ್ನೆ ಇದು. ನಾಲ್ಕು ಕಾಲೇಜುಗಳಿಗೆ ಮಂಜೂರಾತಿ ಕೊಡುವುದಿಲ್ಲವೆಂದು ಆಜ್ಞೆ ಮಾಡಿ, ಇನ್ನೊಂದು ಕಾಲೇಜಿಗೆ ಅನುಮತಿಯನ್ನು ಮತ್ತೆ ನೀಡಿದ್ದಾರೆ. ಒಂದು ಕಾಲೇಜಿಗೆ ಬಿಡುವುದು, ಒಂದು ಕಾಲೇಜಿಗೆ ಕೊಡುವುದು ಇದನ್ನು ಯಾವ ಕಾನೂನು ಪ್ರಕಾರ ಮಾಡಿದ್ದಾರೆಂದು ತಿಳಿಸಬೇಕು

ಶ್ರೀ ಜೀವರಾಜ್ ಆಳ್ವ — ಅಧ್ಯಕ್ಷರೆ, ತಮ್ಮ ಮೂಲಕ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಸಂಬಂಧಪಟ್ಟ ಕಡತವನ್ನು ನ್ಯಾಯಾಲಯದವರು ತರಿಸಿಕೊಂಡರು, ಆದ್ದರಿಂದ ಅಮೂಲಾಗ್ರವಾಗಿ ವರದಿ ನಮ್ಮ ಹತ್ತಿರ ದೊರಕಲಿಲ್ಲ, ಆ ಕಾರಣದಿಂದ ಈ ವಿಚಾರವನ್ನು ಸಭೆಯ ಮುಂದೆ ಇಡಲಿಕ್ಕೆ ಆಗುವುದಿಲ್ಲ.

ಶ್ರೀ ಪಿ. ಎಸ್. ರಾಣೆ.— ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ಸಂಪೂರ್ಣ ಅರಿವು ಇದೆ, ಮಾನ್ಯ ಮಂತ್ರಿಗಳ ಜೊತೆ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಮಾನ್ಯ ಮಂತ್ರಿಗಳು ಕೂಡಲೇ ಮತ್ತೆ ಅನುಮತಿ ನೀಡುವಂಥ ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಮಾನ್ಯ ರಾಣೆಯವರ ಜೊತೆ ಮೂರು ನಾಲ್ಕು ಸಾರಿ ಕುಳಿತು ಕೊಂಡು ಚರ್ಚೆ ಮಾಡಿದ್ದೇನೆ. ಅವರಿಗೆ ವಿಚಾರ ಚೆನ್ನಾಗಿ ಗೊತ್ತಿದೆ, ನನಗೂ ಗೊತ್ತಿದೆ ನ್ಯಾಯಾಲಯದ ಮೊರೆ ಹೋಗಿರುವುದರಿಂದ, ಕಡತವನ್ನು ಅವರು ತರಿಸಿರುವುದರಿಂದ ತೊಂದರೆಯಾಗಿದೆ, ಆ ಕಾರಣದಿಂದ ಮುಂದಕ್ಕೆ ಕುಳಿತು ಚರ್ಚೆ ಮಾಡಿ ನಿರ್ಧಾರಕ್ಕೆ ಬರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ. ಈ ವಿಚಾರ ಹೈ ಕೋರ್ಟ್‌ನವರ ಮುಂದೆ ಹೋದರೂ ಕೂಡ ಕಾರಣ ಏನು ಎಂಬುದನ್ನು ಹೇಳಬಹುದಲ್ಲ ನೀವು ಇಲ್ಲಿ ಕೊಡತಕ್ಕ ಕಾರಣದಿಂದ ಕೋರ್ಟ್‌ನ ಮೇಲೆ ಪರಿಣಾಮವಾಗುತ್ತದೆ, ಆದ್ದರಿಂದ ಇಲ್ಲಿ ಮಾತನಾಡುವುದು ಸಬ್‌ಜುಡೀಸ್ ಆಗುತ್ತದೆಂಬ ಮಾತು ಬೇರೆ. ಮೊದಲು ಕೊಟ್ಟಿದ್ದ ಅನುಮತಿಯನ್ನು ತಾವು ಏತಕ್ಕೆ ವಿತ್‌ಡ್ರಾ ಮಾಡಿಕೊಂಡಿರಿ ಎಂಬುದನ್ನು ಹೇಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ.— ಹೋದ ವರ್ಷ ಈ ಕಾಲೇಜಿಗೆ ಅನುಮತಿಯನ್ನು ಕೊಟ್ಟಿರ ತಕ್ಕದ್ದು ನಿಜ. ಆದಾದ ನಂತರ ಇವರು ಸರಕಾರದಲ್ಲಿ ಕಾಲೇಜನ್ನು ಪ್ರಾರಂಭ ಮಾಡಲಿಲ್ಲ ಎಂದು ತನಿಖಾ ಸಮಿತಿಯನ್ನು ಕಳುಹಿಸಲಾಗಿತ್ತು. ಅಲ್ಲಿ ಕಾಲೇಜನ್ನು ಪ್ರಾರಂಭ ಮಾಡಿಲ್ಲ ಇದರಿಂದ ಅಲ್ಲಿಯ ಹುಡುಗರಿಗೆ ತೊಂದರೆಯಾಯಿತೆಂಬ ಕಾರಣದಿಂದ ತಾವು ಕೊಟ್ಟಿದ್ದ ಅನುಮತಿಯನ್ನು ವಿತ್‌ಡ್ರಾ ಮಾಡಲಾಯಿತು.....

ಶ್ರೀ ಪಿ.ಎಸ್. ರಾಣೆ.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಶ್ವವಿದ್ಯಾನಿಲಯದವರು ತಮ್ಮ ಒಂದು ಸಂತ್ಕೋಲೆಯಲ್ಲಿ.....

ಅಧ್ಯಕ್ಷರು.— ನೀವು ಈ ರೀತಿ ಮಾತನಾಡುತ್ತಾ ಹೋದರೆ ಹೇಗೆ?.....

ಶ್ರೀ ಪಿ ಎಸ್. ರಾಣೆ. — ಸ್ವಾಮಿ, ಅಧ್ಯಕ್ಷರೇ, ವಿಶ್ವವಿದ್ಯಾನಿಲಯದವರು ಒಂದು ಸಂತ್ಕೋಲೆಯನ್ನು ಕಳುಹಿಸಿ ಆದರಲ್ಲಿ.

> "ಹೊಸದಾಗಿ ಸಂಯೋಜನೆಯ ಬಗ್ಗೆ ಮಹಾ ವಿದ್ಯಾಲಯಗಳ ಅಪ್ಪಣೆ ಇಲ್ಲದೆ ಮತ್ತು ಸರ್ಕಾರದಿಂದ ಹೊಸ ಸಂಯೋಜನೆ ನೀಡಿದ ಅಧಿಸೂಚನೆ ಬರುವತನಕ ಮಹಾ ವಿದ್ಯಾಲಯವನ್ನು ಪ್ರಾರಂಭಿಸಬಾರದು ಹಾಗೂ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಎಲ್ಲ ಹೊಣೆ ಅವರದೇ ಆಗಿರುತ್ತದೆ."

ಎಂದು ತಿಳಿಸಿದ್ದಾರೆ. ಇದು ವಿಶ್ವವಿದ್ಯಾನಿಲಯದವರು ಕೊಟ್ಟಂಥ ಒಂದು ಆದೇಶ. ಸ್ವಾಮಿ ಈ ಸುತ್ಕೋಲೆಯನ್ನು ವಿೂರಿ, ನಿಯಮವನ್ನು ವಿೂರಿ ಕಾಲೇಜುಗಳನ್ನು ತೆರೆದವರಿಗೆ ತಾವು ಅನುಮತಿಯನ್ನು ಕೊಡುತ್ತೀರಿ. ಆದರೆ ಸರ್ಕಾರದ ನಿಯಮದ ಪ್ರಕಾರ ನಡೆದುಕೊಂಡವರಿಗೆ ಈ ರೀತಿಯು ತೊಂದರೆಯನ್ನು ಕೊಡುತ್ತೀರಿ. ಇದು ಸರಿಯಲ್ಲ. ನಾನು ಒಳ್ಳೆಯ ಭಾಷೆಯಲ್ಲಿ ಹೇಳುತ್ತಿದ್ದೇನೆ ಅಲ್ಲಿ ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಮಂಕ್ಕಳನ್ನು ಅಡ್ಮಿಷನ್ ಮಾಡಿಕೊಂಡು ಆನಂತರ ಆ ಮಂಕ್ಕಳನ್ನು ಇಷ್ಟು ತೊಂದರೆಗೆ ಸಿಕ್ಕಿಸುವುದು ಈ ಸರ್ಕಾರಕ್ಕೆ ಶೋಭೆ ತರತಕ್ಕ ವಿಷಯವಲ್ಲ.....

ಶ್ರೀ ಜೀವರಾಜ ಆಳ್ವ.— ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಪುನಃ ಹೇಳಬಯಸುತ್ತೇನೆ. ಈ ವಿಚಾರ ನ್ಯಾಯಾಲಯದ ಮುಂದೆ ಇರುವುದರಿಂದ ಇಲ್ಲಿ ಪ್ರಸ್ತಾಪ ಮಾಡುವುದು ಬೇಡ. ಮಾನ್ಯ ಸದಸ್ಯರೂ ಮಂತ್ರಿ ನಾವೂ ಕೂತು ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.— ಮಾನ್ಯ ಖರ್ಗೆಯವರೆ, ಒಂದು ಕಾಲಿಂಗ್ ಅಟೆನ್‌ಷನ್‌ಗೆ ಎಷ್ಟು ಅವಕಾಶವನ್ನು ಕೊಡಬೇಕು ಹೇಳಿ.....

ಶ್ರೀ ಎಸ್. ಬಂಗಾರಪ್ಪ — ಮಾನ್ಯ ಅಧ್ಯಕ್ಷರೆ, ತಾ. ೪-೧೧-೧೯೮೬ಕ್ಕೆ ನಿಮ್ಮ ಸರ್ಕಾರೀ ಆಜ್ಞೆಯನ್ನು ಹೊರಡಿಸಿದೆ. ಆಗ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅದು ಅಕೆಡೆಮಿಕ್ ಇಯರ್ ಆಲ್ಲ. ಅಕೆಡೆಮಿಕ್ ಇಯರ್ ಎಂದರೆ ಜೂನ್‌ನಲ್ಲಿ ಪ್ರಾರಂಭ ಮಾಡಬೇಕು. ಹೊಸ ಅಕೆಡೆಮಿಕ್ ಇಯರ್ ಪ್ರಾರಂಭವಾಗಲಿ ಎಂದು ಅವರು ಸುಮ್ಮನಿದ್ದರು. ಅಷ್ಟರೊಳಗೆ ನೀವು ಕೊಟ್ಟಿದ್ದ ಅನುಮತಿಯನ್ನು ವಿತ್‌ಡ್ರಾ ಮಾಡಿಕೊಂಡಿರಿ. ಸರ್ಕಾರದ ಆದೇಶವನ್ನು ನೀವು ನವೆಂಬರ್‌ನಲ್ಲಿ ಕಳುಹಿಸಿಕೊಟ್ಟು ಅವರು ಕಾಲೇಜನ್ನು ಆಗ ಪ್ರಾರಂಭ ಮಾಡಲಿಲ್ಲ ಎಂದರೆ ಹೇಗೆ? ಅವರು ಕಾಲೇಜನ್ನು ಪ್ರಾರಂಭ ಮಾಡಲಿಲ್ಲ ಎಂದು ಪರ್ಮಿಷನ್‌ನ್ನು ವಿತ್‌ಡ್ರಾ ಮಾಡಿದಿರಿ. ನಿಮಗೆ ನವೆಂಬರ್‌ನಲ್ಲಿ ಯಾವ ಹುಡುಗರು ಸಿಕ್ಕುತ್ತಾರೆ. ಈಗ ಟೈಮ್ ಆಗಿಹೋಗಿದೆ. ನೆಕ್ಸ್ಟ್ ಅಕೆಡೆಮಿಕ್ ಇಯರ್‌ನಲ್ಲಿ ಇದನ್ನು ಪ್ರಾರಂಭ ಮಾಡೋಣ, ಆಗ ಕನ್ಸಿಡರ್ ಮಾಡಿ.....

**ಶ್ರೀ ಜೀವರಾಜ ಆಳ್ವ.**— ಮಾನ್ಯ ಅಧ್ಯಕ್ಷರೆ, ಮಹಲಿಂಗಪುರದಲ್ಲಿಯೂ ಕೂಡ ಇದೇ ರೀತಿ ಆಯಿತು. ಆಗ ಅದರ ಬಗ್ಗೆ ಚರ್ಚೆಯೂ ನಡೆಯಿತು. ಈ ಚರ್ಚೆಗೆ ಸ್ಥಳೀಯ ಶಾಸಕರೂ ಬಂದಿದ್ದರು. ಆದರೆ ಇವತ್ತಿನ ಈ ವಿಷಯ ನ್ಯಾಯಾಲಯದ ಮುಂದಿರುವುದರಿಂದ ಈ ಒಂದು ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಸದಸ್ಯರಾದ ರಾಣೆಯವರು ಬರಲಿ, ಅವರೂ ನಾವೂ ಕೂತು ಚರ್ಚೆ ಮಾಡೋಣ...

(ಗೊಂದಲ)

**ಅಧ್ಯಕ್ಷರು.**— ನಥಿಂಗ್ ವಿಲ್ ಬಿ ರೆಕಾರ್ಡೆಡ್. ನೀವು ಎಷ್ಟು ಹೊತ್ತು ಮಾತನಾಡಿದ್ದೀರಿ.....

(ಗೊಂದಲ)

**ಶ್ರೀ ಆರ್. ಎನ್. ನಾಯಕ್.**— ಹಾಗಾದರೆ ಪರ್ಮಿಷನ್ ಕೊಡಲಿಕ್ಕೆ ಹೇಳಿ.....

(ಗೊಂದಲ)

**ಅಧ್ಯಕ್ಷರು.**— ತಾವು ದಯವಿಟ್ಟು ಕೂಡಿ, ನಿಮ್ಮಿಬ್ಬರ ಸಲುವಾಗಿ ಈ ಅಸೆಂಬ್ಲಿ ಇಲ್ಲ...,

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರಾಣೆಯವರು ಸಭಾಧ್ಯಕ್ಷರ ಮುಂಭಾಗದಲ್ಲಿರುವ ವೇಲ್‌ನೊಳಗೆ ಬಂದು ಕುಳಿತರು.)

(ಗೊಂದಲ)

೧೧.೦೦ ಎ.ಎಂ.

**ಅಧ್ಯಕ್ಷರು.** — ನೀವು ಇಲ್ಲಿ ಬರಬಾರದು ಇಲ್ಲಿ ಬಂದು ಕುಳಿತುಕೊಳ್ಳುವುದಾದರೆ I will take action against you. ನಿಯಮಾವಳಿ ಪ್ರಕಾರ ಆರು ಕಾಲಿಂಗ್ ಅಟೆಂಕ್ಷನ್ ಹಾಕಿದ್ದೇವೆ. ಮಾನ್ಯ ಸದಸ್ಯರು ಈಗಾಗಲೇ ಐದು ಸಾರಿ ವಿವರಗಳನ್ನು ಕೇಳಿದ್ದಾರೆ. ನೀವು ಕೂಡ ಕೇಳಿದ್ದೀರಿ; ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಅವರು ಅಲ್ಲಿ ಬಿಟ್ಟು ಇಲ್ಲಿ ಕುಳಿತು ಕೊಳ್ಳುತ್ತೇನೆಂದರೆ ಏನು ಅರ್ಥ? ನಾನು ಸುಮ್ಮನೆ ಕುಳಿತರೆ ಅವರು ಇಡೀ ದಿವಸವೆಲ್ಲಾ ಮಾತನಾಡುತ್ತಾರೆ. ನಾನು ಈಗ ಮಾನ್ಯ ಸದ್ಯಸ್ಯರ ಗಮನ ಸೆಳೆಯುವ ಸೂಚನೆಯನ್ನು ಕರೆದಿದ್ದೇನೆ. ಶ್ರೀಮತಿ ಮನೋರಮ ಮಧ್ವರಾಜ್‌ರವರೇ, ತಾವು ಮಾನ್ಯ ಸಚಿವರ ಗಮನವನ್ನು ಸೆಳೆಯಿರಿ.

**ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.**— ಮಾನ್ಯ ಸಚಿವರು ಮಾಡುತ್ತೇವೆಂದು ಹೇಳಿಬಿಟ್ಟರೆ ಸಾಕು, ಏತಕ್ಕೆಂದರೆ ಮೈನಾರಿಟೀಸ್ ಕಮ್ಯೂನಿಟಿಯವರು ಇರುತ್ತದೆ. ಕಷ್ಟ ಏನೂ ಇಲ್ಲ.

**ಶ್ರೀ ಎಂ. ರಘುಪತಿ.**— ಮಾನ್ಯ ಅಧ್ಯಕ್ಷರೇ ಮಾನ್ಯ ಖರ್ಗೆಯವರೂ ಕೂಡ ಸಚಿವರಾಗಿದ್ದರು, ಅವರಿಗೆ ಗೊತ್ತಿರುತ್ತದೆ. ೧೫ ವರ್ಷ ಕೆಲಸ ಮಾಡಿರುತ್ತಾರೆ. ನಾನು ಅವರನ್ನು ಕರೆಸಿ ಚರ್ಚೆ ಮಾಡುತ್ತೇನೆ, ಪರಿಹಾರ ಹುಡುಕಿಸುತ್ತೇನೆಂದು ಹೇಳಿದರೆ, ಈಗಲೇ ಆರ್ಡರ್ ಕೊಡಿ ಎಂದು ಹೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**— ಈಗ ಸ್ವಲ್ಪ ತಡವಾದುದು ಇರತಕ್ಕ ಪ್ರಶ್ನೆ. ಈಗಾಗಲೇ ಪರ್ಮಿಷನ್ ಕೊಟ್ಟಿದ್ದಾರೆ. ಕೊಟ್ಟಿರುವ ಪರ್ಮಿಷನ್‌ನ್ನು ಯಾರದೋ ಮಾತನ್ನು ಕೇಳಿ ವಿತ್‌ಡ್ರಾ ಮಾಡಿಕೊಳ್ಳುತ್ತೇವೆಂದರೆ ಮಕ್ಕಳ ಬಗ್ಗೆ ಪಾರ್ಟಿ ಏತಕ್ಕೆ ತರುತ್ತೀರಿ? ಪರ್ಮಿಷನ್ ನೀವೇ ಕೊಟ್ಟು ಮತ್ತೇ ನೀವೇ ಏತಕ್ಕೆ ತಿರಸ್ಕಾರ ಮಾಡುತ್ತೀರಿ? ಯಾರು ಗಲಾಟೆ ಮಾಡುತ್ತಾರೆ ಅವರಿಗೆ ಕೊಡುತ್ತೀರಿ, ಯಾರು ಗಲಾಟೆ ಮಾಡುವುದಿಲ್ಲ ಅವರಿಗೆ ಕೊಡಬಾರದೇ? ಅದು ಮುಖ್ಯಮಂತ್ರಿಗಳ ಡಿಸ್ಕ್ರಿಷ್ಟ್ ಅವರಿಗೂ ಲಾಭವಾಗುತ್ತದೆ.

(ಗೊಂದಲ)

x x x x x

---

* ಈ ನಿಟ್ಟಿನಲ್ಲಿ ನಡೆದ ಸಂಭಾಷಣೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಿಲ್ಲ.

ಶ್ರೀ ಆರ್. ಎನ್. ನಾಯಕ್.— ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ತಾವು ಈ ರೀತಿ ಮಾತನಾಡಿದರೆ ನಾವು ಏನೂ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು.— ಈ ವಿಷಯವನ್ನು ಇಲ್ಲಿಗೆ ಮುಗಿಸಿರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಉತ್ತರ ಕೊಡಿ ಎಂದು ಹೇಳಿದರೆ ಸಾಕು.

ಅಧ್ಯಕ್ಷರು.— ಈಗಾಗಲೇ ಕೊಟ್ಟಿದ್ದಾರೆ. ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರು ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಇನ್ನು ಹೆಚ್ಚಿಗೆ ಅವಕಾಶವನ್ನು ಕೊಡಲು ಸಾಧ್ಯವಾಗುವುದಿಲ್ಲ. ಈವತ್ತು ಬಹಳಷ್ಟು ಡಿಮ್ಯಾಂಡ್ಸ್ ಇರುತ್ತವೆ. ರಾತ್ರಿ ೬ ಗಂಟೆಯವರೆಗೆ ಕುಳಿತರೂ ಸಾಕಾಗುವುದಿಲ್ಲ.

(ಗೊಂದಲ)

x x x x x

ಅಧ್ಯಕ್ಷರು.— ಸರ್ಕಾರ ಕೊಟ್ಟ ಉತ್ತರದಿಂದ ಸ್ಯಾಟಿಸ್‌ಫೈ ಆಗಲಿಲ್ಲವೆಂದರೆ ಬೇರೆ ರೀತಿ ಪ್ರಯತ್ನ ಮಾಡಬಹುದು. ಅವರ ಜೊತೆ ಕುಳಿತುಕೊಂಡು ಡಿಸ್‌ಕಷನ್ ಮಾಡಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ಕೂಡೆ ಕುಳಿತು ಡಿಸ್‌ಕಷನ್ ಮಾಡಿರುತ್ತಾರೆ, ಮಾಡಿಯೇ ಈ ರೀತಿ.....

ಅಧ್ಯಕ್ಷರು.— ಮಾನ್ಯ ವಿರೋಧ ಪಕ್ಷದ ನಾಯಕಿಯರೇ, ಮಾನ್ಯ ಸದಸ್ಯರಿಗೆ ಐದು ಸಾರಿ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ತಾವು ಅವರಿಗೆ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರವರೇ ಸರಿ ಮಾಡಿಕೊಳ್ಳುತ್ತಾರೆಂದು ಇದ್ದೆ. ತಾವು ನನ್ನ ಹೆಸರನ್ನು ಎಳೆದಿರಿ.

ಅಧ್ಯಕ್ಷರು.—ತಾವು ವಿರೋಧ ಪಕ್ಷದ ನಾಯಕಿಯರು. ಆಗಿಂದಾಗ್ಗೆ ತಮ್ಮ ಸಲಹೆ ಸೂಚನೆಗಳನ್ನು ಸಭೆ ನಡೆಯುವುದಕ್ಕೆ ಕೊಡಬೇಕಾಗುತ್ತದೆ.

ಶ್ರೀ ಕೆ. ಎಸ್, ನಾಗರತ್ನಮ್ಮ.—ಅವರು ಕೇಳಿದ ಪ್ರಶ್ನೆ ಏನು ? ಈಗ ಪರ್ಮಿಷನ್ ಕೊಟ್ಟು ೩ ತಿಂಗಳಲ್ಲಿ ಪಂಪ್ಸೆ ವಾಪಸ್ಸು ತೆಗೆದುಕೊಂಡರೆ ಆ ಮಕ್ಕಳ ಗತಿ ಏನು ಎಂದು ಕೇಳುತ್ತಿದ್ದಾರೆ ನಿಮ್ಮ ಮಕ್ಕಾಳಾಗಿದ್ದರೆ ಏನು ಮಾಡುತ್ತಿದ್ದಿರಿ ? ಇದನ್ನು ಅವರು ೩ ಸಾರಿ ಅಲ್ಲ ಹತ್ತು ಸಾರಿ ಕೇಳಿದರೂ ತಪ್ಪಿಲ್ಲ.

ಅಧ್ಯಕ್ಷರು.—ಅದಕ್ಕೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಹಾಗೂ ನಾನು ಒಂದಲ್ಲ ನಾಲ್ಕು ಸಾರಿ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೩ ತಿಂಗಳ ಹಿಂದೆ ಅನುಮತಿ ಕೊಟ್ಟು ಮತ್ತೆ ವಾಪಸ್ಸು ತೆಗೆದುಕೊಂಡರೆ ಹೇಗೆ ? ಮಂತ್ರಿಗಳು ಏನು ರಾಜಕೀಯ ಮಾಡುತ್ತಿದ್ದಾರೆಯೇ ಹೇಗೆ ?

MR. SPEAKER —Nothing will go on record. The matter has been closed, I will take up next calling attention.

ಶ್ರೀ ಆರ್. ವಿ ದೇಶಪಾಂಡೆ.—ನೇರವಾಗಿ ಆಪಾದನೆ ಮಾಡುತ್ತಿದ್ದಾರೆ ಮಾನ್ಯ ರಾಣೆಯವರಿಗೆ ಗೊತ್ತು, ಅವರ ಕ್ಷೇತ್ರದಲ್ಲಿ ಐ. ಟಿ. ಐ. ಶುರು ಮಾಡುವುದಕ್ಕೆ ವಿರೋಧವಿದ್ದರೂ ನಾವು ಸಹಾಯ ಮಾಡಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಅವರು ವಿರೋಧ ಮಾಡುವುದು ಸರಿಯಲ್ಲ. ನಾನು ಅವರಿಗೆ ಸಹಾಯ ಮಾಡಿದ್ದೇನೆ.

ಅಧ್ಯಕ್ಷರು.—ನಿಮಗೆ ಉಪಕಾರ ಮಾಡಿದ್ದೇವೆಂದು ಹೇಳುತ್ತಿದ್ದಾರೆ ಕೇಳಿ.

---

x ಮೇಲಿನ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಂತ್ರಿಗಳ ಮೇಲೆ ನೇಗವಾಗಿ ಆಪಾದನೆ ಮಾಡುವುದು ಸಮ್ಮತವೇ ?

MR. SPEAKER.—The matter has been closed.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಹೈಕೋರ್ಟಿನಲ್ಲಿರತಕ್ಕ ಕೆಸ್‌ನ್ನು ವಿತ್ ಡ್ರಾ ಮಾಡಿಕೊಳ್ಳುತ್ತಾರೆಯೇ ?

MR. SPEAKER.—According to rules, on a calling attention a member can only make brief submission and ask clarificatory question. Under rule-197 only those members, whose name has appeared against the calling attention notice, are entitled to ask clarificatory question one each on the minister's statement. Also, the Chair cannot compel a minister to answer each and every clarificatory question or to answer a clarification in a particular way."

ಅಧ್ಯಕ್ಷರು.—ರೂಲ್ಸ್‌ನಲ್ಲಿ ಒಂದು ಸಾರಿ ಅವಕಾಶ ಕೊಡಬೇಕೆಂದು ಇದೆ. ಆದರೂ ನಾನು ೩-೪ ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಪಿ. ಎಸ್. ರಾಣೆ.—ಅವಕಾಶ ಕೊಟ್ಟಿಲ್ಲವೆಂದು ಹೇಳುತ್ತಿಲ್ಲ.

ಅಧ್ಯಕ್ಷರು.—ಅವಕಾಶ ಕೊಟ್ಟು ಕೊಟ್ಟು ಈ ರೀತಿ ಮಾಡಿದರೆ ನಾನು ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ಆ ವಿಚಾರ ಮುಗಿದಿದೆ. ಒಂದು ಸಾರಿ ಬದಲಿಗೆ ೪ ಸಾರಿ ಕೊಟ್ಟಿದ್ದೇನೆ. ನಿಮಗೂ ಮಾನ್ಯ ಖರ್ಗೆಯವರಿಗೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ಕೊಟ್ಟಿದ್ದೀರಿ; ಇಲ್ಲವೆಂದು ಹೇಳುವುದಿಲ್ಲ. ಆದರೆ ಸಮಸ್ಯೆ ಬಗೆ ಹರಿಯಬೇಕಲ್ಲಾ.

ಅಧ್ಯಕ್ಷರು.—ಈಗಾಗಲೇ ಉತ್ತರ ಕೊಟ್ಟಾ ಆಗಿದೆ. ಈ ಪ್ರಕಾರ ಮಾಡಿದರೆ ಕೊನೆಯಂ ಅಸ್ತ್ರವೇನೆಂದರೆ ಸದಸ್ಯರು ಸಭೆಯಂ ಹೊರಗೆ ಹೋಗಬೇಕೆಂದು ಆದೇಶ ಮಾಡಬೇಕಾಗುತ್ತದೆ. ಯಾವ ಸದಸ್ಯರ ನಡುವಳಿಕೆ.....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆಗಲೇ ಓದಿದರಲ್ಲಾ,

ಅಧ್ಯಕ್ಷರು.—ದಯವಿಟ್ಟು ತಾವು ತಮ್ಮ ಸ್ಥಳಕ್ಕೆ ಹೋಗಬೇಕಂ, ಇಲ್ಲದಿದ್ದರೆ ನಾನಂ ನಿಮ್ಮ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಪಿ. ಎಸ್. ರಾಣೆ.—ನಾನಂ ವಿನಂತಿ ಮಾಡಿಕೊಳ್ಳುತ್ತೇನೆ.....

ಅಧ್ಯಕ್ಷರು.—ಇಲ್ಲ, ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗತಕ್ಕದ್ದು. ಏಕೆಂದರೆ ೪ ಸಾರಿ ಅವಕಾಶ ಕೊಟ್ಟಿದ್ದೇನೆ. ಆದರೂ ನೀವು ಸಭೆ ನಡೆಯಂವುದಕ್ಕೆ ಅಡ್ಡ ಬರುತ್ತಿದ್ದೀರಿ, ಅಡಚಣೆ ಉಂಟಂ ಮಾಡುತ್ತಿದ್ದೀರಿ. ಸ್ಪೀಕರ್ ರೂಲಿಂಗ್ ಕೊಟ್ಟರೆ ಆ ರೂಲಿಂಗನ್ನು ಧಿಕ್ಕಾರ ಮಾಡುತ್ತಿದ್ದೀರಿ. ನಿಮ್ಮ ಮೇಲೆ ಕ್ರಮಂ ತೆಗೆದುಕೊಳ್ಳವುದಕ್ಕೆ ಮೊದಲು ದಯವಿಟ್ಟು ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ ಎಂದು ಪುನ್ಹೊಮ್ಮೆ ಹೇಳುತ್ತೇನೆ. ತಾವು ಸಭೆ ನಡೆಯುವುದಕ್ಕೆ ಅಡ್ಡ ಬರುತ್ತಿದ್ದೀರಿ. ಗಮನ ಸೆಳೆಯುವ ಸೂಚನೆ ಮೇಲೆ ಒಂದು ಸಾರಿ ಕೇಳುವುದಕ್ಕೆ ಅವಕಾಶ ಕೊಡಬೇಕೆಂದು ರೂಲ್ಸ್‌ನಲ್ಲಿದ್ದರೂ ಕೂಡ ನಾನು ಇರಲಿ ಎಂದು ೩-೪ ಸಾರಿ ಕೊಟ್ಟಿದ್ದೇನೆ. ಮಂತ್ರಿಗಳು ಉತ್ತರ ಹೇಳಿಯಾಗಿದೆ. ಮುಂದಿನ ಗಮನ ಸೆಳೆಯುವ ಸೂಚನೆಯನ್ನು ಪ್ರಸಾ ಪಿಸಿ ಎಂದು ಕರೆದಿದ್ದೇನೆ. ಇಷ್ಟಾದರೂ ಸ್ಥಳಕ್ಕೆ ಹೋಗಿ ಎಂದರೆ ಪುನಃ ಹೇಳುತ್ತೇನೆ, ದಯವಿಟ್ಟು ಹೋಗ ಬೇಕಂ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದರಲ್ಲಿ ಅಹರು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ರಾಜೆಯವರು ಅವರ ಪಾರ್ಟಿ ಡೆಪ್ಯುಟಿ ಲೀಡರ್ ಅವರ ಆದೇಶವನ್ನೂ ಧಿಕ್ಕಾರ ಮಾಡಿದ್ದಾರೆ. ನಮ್ಮ ಆದೇಶವನ್ನೂ ಧಿಕ್ಕಾರ ಮಾಡಿದ್ದಾರೆ. ಅವರು ಮೊದಲು ಅವರ ಸೀಟಿಗೆ ಹೋಗ ಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ...

ಅಧ್ಯಕ್ಷರು.—ಸಾಧ್ಯ ಇಲ್ಲ. ತಮ್ಮ ಸ್ಥಳಕ್ಕೆ ಹೋಗಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಇಲ್ಲದೇ ಹೋದರೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಹೇಳುವುದನ್ನು ಸರ್ಕಾರವು ಕೇಳುವುದಿಲ್ಲವಲ್ಲಾ.

ಅಧ್ಯಕ್ಷರು.—ಆ ವಿಷಯ ಮುಂಗಿದು ಹೋಗಿದೆ. ಈಗ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾಡಲಾಗುತ್ತದೆ ಎಂದು ಹೇಳಿದರೆ ಏನಾಗುತ್ತದೆ ? ಆರ್ಡರ್ ಇಷ್ಟೂ ಮಾಡಿರುವುದನ್ನು ವಿತ್ ಡ್ರಾ ಮಾಡಿ...

ಅಧ್ಯಕ್ಷರು.—ಇವರ ಬಗ್ಗೆ ಮಾತಿಲ್ಲ. ಮೊದಲು ಮಾನ್ಯ ಸದಸ್ಯರು ಅವರ ಸ್ಥಳಕ್ಕೆ ಹೋಗಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏನು ಕಷ್ಟವಾಗುತ್ತದೆ ಮಂತ್ರಿಗಳು ಹೇಳಿದರೆ ?

ಅಧ್ಯಕ್ಷರು.—ಬೇರೆ ಯಾವುದೇ ಮಾತಿಲ್ಲ. The matter has been closed. The hon. member must go to his seat. ಮಾನ್ಯ ಖಾರ್ಗೆಯವರೇ, ತಾವು ಕುಳಿತುಕೊಳ್ಳಿ. ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಹೋಗಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ...

ಅಧ್ಯಕ್ಷರು.—ಇದರಲ್ಲಿ ಏಂತ್ತೇನು ? ನಾನು ಬೇರೆಯವರಿಗೆ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರು ಹೋಗಿ ಕುಳಿತುಕೊಳ್ಳತಕ್ಕದ್ದು ಕರೆಕ್ಟ್. ಆ ಪ್ರಶ್ನೆಯಲ್ಲ. ತಮ್ಮ ಮೂಲಕ ಜೀವರಾಜ ಆಳ್ವ ಅವರಿಗೆ ಒಂದು ವಿಷಯ ಹೇಳುತ್ತೇನೆ.

ಅಧ್ಯಕ್ಷರು.—ಆ ವಿಷಯ ಮುಗಿದಿದೆ. ಉತ್ತರ ಹೇಳಿಯಾಗಿದೆ. ಮುಂದಿನ ಕಾಲಿಂಗ್ ಅಟೆನ್‌ಷನ್ ಕರೆದಿದ್ದೇನೆ. ಶ್ರೀಮತಿ ಮನೋರಮ ಮಧ್ವರಾಜ್ ಅವರು ಗಮನ ಸೆಳೆಯಬೇಕು.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುತ್ತೇನೆ...

ಅಧ್ಯಕ್ಷರು.—ಏನು ಹೇಳುವುದು ಬೇಡ. ಅವರನ್ನು ಸ್ಥಳಕ್ಕೆ ಹೋಗಿ ಎಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಇದು ಮುಂದುವರೆಸಬೇಕು ಎಂತಲಾ ? ಮಹಾಲಿಂಗ ಪುರದಲ್ಲಿ ಮಾಡಿದ ಹಾಗೆ ನಮ್ಮಿದೂ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅದು ಮುಗಿದಿದೆ.

ಶ್ರೀ ಎಸ್. ಬಂಗಾರಪ್ಪ.—ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಹೈ ಕೋರ್ಟಿನಲ್ಲಿ ನಡೆಯುವುದು ನಹೆಯಲಿ. ಪಂಕ್ಚಳಿಗೆ ಅನ್ಯಾಯವಾಗಬಾರದು: ಕಾಲೇಜನ್ನು ಮುಂದುವರೆಸುತ್ತೇವೆ ಎಂದು ತೀರ್ಮಾನ ಮಾಡಿದರೆ ತಪ್ಪಾಗುವುದಿಲ್ಲ.

ಅಧ್ಯಕ್ಷರು.—ಆಗುವುದಿಲ್ಲ. ಮೊದಲು ಅವರನ್ನು ಅವರ ಸೀಟಿಗೆ ಕಳುಹಿಸಿ. I will not allow you to speak.

ಶ್ರೀ ಎಸ್. ಬಂಗಾರಪ್ಪ.—ಡಾ॥ ಆಳ್ವ ಅವರೇ...

ಅಧ್ಯಕ್ಷರು.—ಮೊದಲು ಅವರನ್ನು ಕಳುಹಿಸಿ. ಆ ಮೇಲೆ ನೋಡೋಣ. ಮಾನ್ಯ ಬಂಗಾರಪ್ಪ ನವರೇ, ಅವರಿಗೆ ಹೇಳಿ. ಇಲ್ಲದೇ ಹೋದರೆ ನಾನು ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಾವೂ ಮಾಡಬೇಕಾಗುತ್ತದೆ ಈ ತರಹ.....

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದು ಇದಕ್ಕೂ ಕೂಡ ಪ್ರಾರಂಭ ಮಾಡಿ ಮುಂದು ವರೆಸೋಣ. ಹೈಕೋರ್ಟಿನವರು ಬೇಡ ಎಂದರೆ...

MR. SPEAKER.—Please address the Chair. Nothing will go on record.

ಶ್ರೀ ಎಸ್. ಬಂಗಾರಪ್ಪ.—ವಿಚಾರ ಕ್ಲೋಸ್ ಆಗುವುದಕ್ಕೆ ಸಾಧ್ಯವಿದೆ.

ಅಧ್ಯಕ್ಷರು.—ಮುಂದಿನ ಕಾಲಿಂಗ್ ಅಟೆನ್‌ಷನ್ ಕರೆದಿದ್ದೇನೆ,

ಶ್ರೀ ಎಸ್. ಬಂಗಾರಪ್ಪ.—ನಾನು ನಿಮಗೆ ಸಲಹೆ ಮಾಡುತ್ತಿದ್ದೇನೆ. ಕಾಲೇಜು ವಿಂದು ವರೆಷೋಣ. ಹೈಕೋರ್ಟಿನಿಂದ ಆದೇಶ ಬಂದರೆ ನಿಲ್ಲಿಸುತ್ತೇವೆ ಎಂಬ ಕರಾರಿನ ಮೇಲೆ ಮುಂದುವರೆಸಿ. ಬಾಯಿ ಬಿಡದೆ ಪತಕ್ಕೆ ಕೂತ್ತಿದ್ದೀರಿ ?

MR. SPEAKER.—Please address the Chair.

(INTERRUPTION)

MR. SPEAKER.—Nothing will go on record,

x x x x

(ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುತ್ತಲೇ ಇದ್ದರು. ಅಧ್ಯಕ್ಷರ ಆದೇಶದ ಮೇರೆಗೆ ಅವುಗಳನ್ನು ದಾಖಲಿಸಲಿಲ್ಲ.)

ಶ್ರೀ ಪ್ರಭಾಕರ ಎನ್. ರಾಣೆ.—ಸರ್ಕಾರ ಪಕ್ಷಪಾತ ಮಾಡುತ್ತಿದೆ.

MR. SPEAKER.—Nothing will go on record.

x x x

ಶ್ರೀ ಆರ್. ಎನ್. ನಾಯಕ್.—ಜನತಾ ಎಂ.ಎಲ್.ಎ. ಇದ್ದ ಕ್ಷೇತ್ರದಲ್ಲಿ ಕೊಟ್ಟಿದ್ದೀರಿ. ಅದೇ ರೀತಿ ಕಾರವಾರ ಕಾಂಗ್ರೆಸ್ ಎಂ.ಎಲ್.ಎ. ಕ್ಷೇತ್ರವಾಗಿದೆ. ಅಲ್ಲಿಗೆ ಕೊಡುವುದಕ್ಕಾಗುವುದಿಲ್ಲವೇ ?

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ.....

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ರಘುಪತಿಯವರೇ, ನಿಮ್ಮ ಕಾಲದಲ್ಲಿ ಅಂತ ಕಾಣುತ್ತದೆ. ಅಲ್ಲಿ ಕಾಲೇಜನ್ನು ಕೊಟ್ಟಿರುವುದು. ಅಂದರೆ ಒಬ್ಬ ಮಂತ್ರಿಗಳು ಕೊಟ್ಟಂತಹ ಕಾಲೇಜನ್ನು ಇನ್ನೊಬ್ಬ ಮಂತ್ರಿಗಳು ಮುಚ್ಚಿಕೊಂಡು ಬರುವುದು ನಿಮ್ಮ ನೀತಿಯಾ ?

SRI M. RAGHUPATHI.—I am on a point of order.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ದೇಶ್‌ಪಾಂಡೇಯವರೇ, ನೀವು ಜಿಲ್ಲಾ ಮಂತ್ರಿಗಳಾಗಿದ್ದೀರಿ. ಏನು ಇದು.....

ಶ್ರೀ ಆರ್. ವಿ. ದೇಶಪಾಂಡೆ.—ನಾನು ಜಿಲ್ಲಾ ಮಂತ್ರಿಯಾಗಿದ್ದೇನೆ. ನಮ್ಮ ಇಡೀ ಜಿಲ್ಲೆಯಲ್ಲಿ ಶಿಕ್ಷಣ ವಿಚಾರದಲ್ಲಿ ಜನತಾ ಸರ್ಕಾರವಾಗಲಿ ಜನತಾ ಪಕ್ಷದ ಕಾರ್ಯಕರ್ತರಾಗಲಿ ಮಧ್ಯ ಪ್ರವೇಶ ಮಾಡಿಲ್ಲ. ಅದು ಶ್ರೀಮಾನ್ ರಾಣೆಯವರಿಗೂ ಗೊತ್ತಿದೆ. We have gone out of way in spite of the opposition from the local people. You ask local people in Karwar. Local institutions are opposing.

ಶ್ರೀ ಆರ್. ಎನ್. ನಾಯಕ್.—ಹಾಗಾದರೆ ಬನ್ನಿ ಕಾರವಾರಕ್ಕೆ ಹೋಗೋಣ. ನೀವೂ ಟೂರ್ ಹಾಕಿಕೊಂಡು ಬನ್ನಿ, ನಾವೂ ಬರುತ್ತೇವೆ. ಲೋಕಲ್ ಜನ ಏನು ಹೇಳುತ್ತಾರೆಂಬುದನ್ನು ಕೇಳೋಣ.

(ಮುಂದಿನ)

---

*Not recorded as ordered by the Chair

ಅಧ್ಯಕ್ಷರು.—ಶ್ರೀಮಾನ್ ಪ್ರಭಾಕರ್ ರಾಣೆಯವರೇ ನೀವು ನಿಮ್ಮ ಸ್ಥಾನಕ್ಕೆ ಹೋಗಬೇಕು.

ಶ್ರೀ ಎಸ್. ಬಂಗಾರಪ್ಪ.—ಹೋಗುತ್ತಾರೆ. ಸ್ವಲ್ಪ ನಿಧಾನ ಮಾಡಿ. ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ ನೀವು ಏನೇ ಮಾತನಾಡಬೇಕಾದರೂ ಆಮೇಲೆ ನೋಡೋಣ. ಆದರೆ ಮೊದಲು ಶ್ರೀ ರಾಣೆಯವರು ಅವರ ಸ್ಥಾನಕ್ಕೆ ಹೋಗಬೇಕು.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ಆ ಬಗ್ಗೆ ಹೇಳಿಕೆ ಕೊಟ್ಟರೆ ಆಯಿತಲ್ಲಾ ;

ಅಧ್ಯಕ್ಷರು.—ಮೊದಲು ಅವರು ಅವರ ಸ್ಥಾನಕ್ಕೆ ಹೋಗಬೇಕು.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಬೊಮ್ಮಾಯಿಯವರೇ, ನೀವು ಸೀನಿಯರ್ ಮಿನಿಸ್ಟರ್ ಇದ್ದೀರಿ. ನೀವಾದರೂ ಹೇಳಿ.....

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಚರ್ಚೆ ಮಾಡಿ ಅಂತ ಹೇಳಿದ್ದಾರೆ, ಈ ವಿಚಾರವನ್ನು ತೆಗೆದು ಕೊಂಡು ೪೦ ನಿಮಿಷವಾಗಿದೆ. ಮಾನ್ಯ ಸದಸ್ಯರು ಮಂತ್ರಿಗಳ ಹತ್ತಿರ ಹೋಗಿ ಚರ್ಚೆ ಮಾಡಿ. ವಿಚಾರ ಹೈಕೋರ್ಟಿನಲ್ಲಿದೆ ಅಂತ ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಮಂತ್ರಿಗಳ ಹತ್ತಿರ ೩-೪ ಸಾರಿ ಈಗಾಗಲೇ ಚರ್ಚೆ ಮಾಡಿದ್ದಾರೆ. ಕಾಲೇಜನ್ನು ಪ್ರಾರಂಭ ಮಾಡಿದ್ದು ಈಗ ಅದನ್ನು ವಾಪಸಿದ್ದಾರೆ.

ಶ್ರೀ ಎಂ. ರಘುಪತಿ.—ತಾವು ಸಭೆಯ ನಿಯಮಾವಳಿಯ ಪ್ರಕಾರ ಒಂದು ಸೂಚನೆಯನ್ನು ಕೊಟ್ಟಿದ್ದೀರಿ.

ಶ್ರೀ ಸಿ.ಪಿ. ಮಂಡಲಗಿರಿಯಪ್ಪ.—ಸಭೆಯು ಆರ್ಡರ್‌ನಲ್ಲಿಲ್ಲದಾಗ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ ?

ಅಧ್ಯಕ್ಷರು.—ನಾನು ಈಗ ಶ್ರೀಮಾನ್ ರಘುಪತಿಯವರನ್ನು ಕರೆದಿದ್ದೇನೆ. ಅವರು ಹೇಳಿದ್ದು ಮಾತ್ರ ರೆಕಾರ್ಡ್ ಆಗುತ್ತದೆ. ಬೇರೆಯವರು ಯಾರೂ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ರಘುಪತಿ.—ನಾನು ಈ ಸಂದರ್ಭದಲ್ಲಿ ಏನನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ ತಾವು ನಿಯಮಾವಳಿಗಳನ್ನು ಓದಿ ಸ್ಪಷ್ಟವಾಗಿ ಹೇಳಿದ್ದೀರಿ. ಗಮನ ಸೆಳೆಯುವ ಸೂಚನೆಯನ್ನು ಕೇಳಿದಾಗ ಇರತಕ್ಕ ಸಂಪ್ರದಾಯ ಏನು ಅಂದರೆ ಸರ್ಕಾರ ಇದೇ ರೀತಿಯ ಉತ್ತರ ಕೊಡಬೇಕೆಂದು ಯಾರೂ ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ ಒಬ್ಬ ಸದಸ್ಯರು ಎತ್ತಿದಂತಹ ಪ್ರಶ್ನೆಗೆ ೪೦ ನಿಮಿಷಗಳ ಕಾಲ ಈ ಸಭೆಯ ಕಾಲವನ್ನು ವ್ಯಯ ಮಾಡಿದ್ದೇ ಆದರೆ ಅನಾವಶ್ಯಕವಾಗಿ ಕಾಲ ಹರಣ ಮಾಡಿದಂತಾಗುತ್ತದೆ. ಇದರ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ಮಂಡಲಗಿರಿಯಪ್ಪನವರು ಸಭೆ ಔಟ್ ಆಫ್ ಆರ್ಡರ್‌ನಲ್ಲಿದೆ ಅಂತ ಹೇಳಿದರು. ಅವರು ಹೊಸಬರು ಅವರಿಗೆ ಗೊತ್ತಿಲ್ಲ Any number of people sitting in the well of the House will not make the House "not in order." The House will be in order. There are plenty of rulings given in Loka Sabha as well as in this House. ಅದು ಆಡ್ಡ ಬರುವುದಿಲ್ಲ. ಅವರು ನಿಂತುಕೊಂಡಿರಲಿ. ಸದನದ ಕಾರ್ಯಕಲಾಪಗಳನ್ನು ನಡೆಸಬೇಕು. ಅದಕ್ಕೆ ಅನುವು ಮಾಡಿಕೊಡಬೇಕು. ಇವತ್ತು ಅಜೆಂಡಾದಲ್ಲಿ ಬೇರೆ ಬೇರೆ ಹಲವಾರು ಕಾರ್ಯಕ್ರಮಗಳಿವೆ. ಬೇರೆ ಸದಸ್ಯರಿಗೂ ಅವಕಾಶ ದೊರಕಬೇಕೋ ಬೇಡವೋ ? ಆದ್ದರಿಂದ ಸದನದ ಕಾರ್ಯಕಲಾಪ ಸೂಸೂತ್ರವಾಗಿ ನಡೆಯುವುದಕ್ಕೆ ವ್ಯವಸ್ಥೆ ಮಾಡಿಕೊಡಿ. ಇದೇ ನನ್ನ ಕ್ರಿಯಾಲೋಪ.

Mr. Speaker.—I agree with you.

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ಸದನದಲ್ಲಿ ಶ್ರೀಮಾನ್ ಜಾಲಪ್ಪನವರು ಹಾಗೂ ಶ್ರೀಮಾನ್ ರಘುಪತಿಯವರು ಇವರಿಬ್ಬರಿಗೇನಾ ಭಾಷಣ ಮಾಡುವುದಕ್ಕೆ ಗೊತ್ತಿರುವುದು. ಬಾಕಿಯವರಿಗೆ ಭಾಷಣ ಮಾಡುವುದು ಗೊತ್ತಿಲ್ಲವೇ ?

**ಅಧ್ಯಕ್ಷರು.**—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರು.

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ಆ ಸದಸ್ಯರ ಕ್ಷೇತ್ರದಲ್ಲಿರುವಂತಹ ಮಕ್ಕಳಿಗೆ ತೊಂದರೆಯಾಗಿದೆ. ಮೊದಲು ಮಕ್ಕಳನ್ನು ಸೇರಿಸಿಕೊಂಡು ನಂತರ ಆ ಕಾಲೇಜನ್ನು ಮುಚ್ಚಿದರೆ ಆ ಮಕ್ಕಳಿಗೆ ಅನ್ಯಾಯವಾಗುವುದಿಲ್ಲವೆ ? ಅದನ್ನು ಕೇಳಿದರೆ ಮಂತ್ರಿಗಳೆಲ್ಲಾ ಬಾಯಿಗೆ ಬೆರಳು ಇಟ್ಟುಕೊಂಡು ಕೂತಿದ್ದಾರೆ. ಇವರ ಬಗ್ಗೆ ಅವರು ಆ ರೀತಿ ನಡೆದುಕೊಳ್ಳುವುದು ಯಾವ ನ್ಯಾಯ ? ಅವರು ಕೂತು ತಮಾಷೆ ನೋಡುತ್ತಿದ್ದರೆ ಹೇಗೆ ?

(ಗೊಂದಲ)

**ಅಧ್ಯಕ್ಷರು.**—ತಮಾಷೆ ಎಂದು ಅಷ್ಟು ಲಘುವಾಗಿ ಮಾತನಾಡಬಾರದು ನೀವು.

(ಗೊಂದಲ)

**ಶ್ರೀ ಎಸ್. ಬಂಗಾರಪ್ಪ.**—ಸರ್ಕಾರ ಇವರ ವಿಷಯದ ಬಗ್ಗೆ.....

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**—ಸರ್ಕಾರಿ ಆಜ್ಞೆಗೆ ಬೆಲೆ ಇಲ್ಲವೇ ?

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ,**—ಅಲ್ಲಿಯ ಮಕ್ಕಳ ಗತಿ ಏನು ?

**ಅಧ್ಯಕ್ಷರು.**—ನಾನು ಈಗ ಮುಂದಿನ ವಿಷಯಕ್ಕೆ ಹೋಗುತ್ತೇನೆ. ಶ್ರೀಮತಿ ನಾಗರತ್ನಮ್ಮನವರೇ ನಿಮ್ಮಲ್ಲಿದೂ ಒಂದು ಕಾಲಿಂಗ್ ಅಟೆನ್‌ಷನ್ ಇದೆ. ಅದಕ್ಕಿಂತಾ ಮೊದಲು ಅವರದ್ದು ಇದೆ.

**ಶ್ರೀ ಎಸ್. ಬಂಗಾರಪ್ಪ.**—ನಮ್ಮನ್ನು ಬಿಟ್ಟು ನೀವು ಮುಂದೆ ಹೋಗುತ್ತೀರಾ ?

**ಅಧ್ಯಕ್ಷರು.**—ಶ್ರೀಮತಿ ನಾಗರತ್ನಮ್ಮನವರೇ, ತಾವೂ ೬ ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೀರಿ. ತಾವೇ ಹೇಳಿ. ಕಾಲಿಂಗ್ ಅಟೆನ್‌ಷನ್‌ಗೆ ಒಂದು ಸಲದ ಬದಲು ೪ ಸಲ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ಖಾರ್ಗೆಯವರಿಗೂ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ.**—ಅದಂ ಸಮರ್ಪಕ ಎಂದು ಹೇಳುತ್ತೀರಾ ?

**ಅಧ್ಯಕ್ಷರು,**—ಈಗ ಮುಂದಿನ ವಿಷಯಕ್ಕೆ ಹೋಗೋಣ.

**ಶ್ರೀ ಪಿ. ಎಸ್. ರಾಣೆ.**—ಅಧ್ಯಕ್ಷರೇ, ನನಗೆ ಸರ್ಕಾರದಿಂದ.....

**ಅಧ್ಯಕ್ಷರು.**—ನಿಯಮಾವಳಿಗಳನ್ನು ಗಾಳಿಗೆ ತೂರಿ ಇಲ್ಲಿ ಬಂದಿದ್ದೀರಿ. ನೀವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಶ್ರೀಮತಿ ನಾಗರತ್ನಮ್ಮನವರೇ, ಈಗ ನಿಮ್ಮ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣವೇ ?

**ಶ್ರೀಮತಿ ಕೆ. ಎಸ್. ನಾಗರತ್ನಮ್ಮ** —ಹೀಗಾದರೆ ತಾವೇ ನಡೆಸಿಕೊಳ್ಳಿ. ಇದೇನಿದು ?

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**—ಸಮಾಧಾನದಿಂದ ಕೇಳಿದ್ದಕ್ಕೂ ಇಲ್ಲಿ ಉತ್ತರ ಇಲ್ಲ. ನ್ಯಾಯವಾದಂತಹ ಪ್ರಶ್ನೆಗೂ ಕೂಡಾ ಇಲ್ಲಿ ಪರಿಹಾರ ಇಲ್ಲ. ರಾಜಕೀಯ ಉದ್ದೇಶದಿಂದಲೇ ವರ್ಗಾಂದುವರೆಸುವುದಾದರೆ ವರ್ಗಾಂದುವರೆಸಿ. ನಾವು ಕೇಳಿಕೊಂಡು ಹೋಗುತ್ತೇವೆ.

**ಅಧ್ಯಕ್ಷರು.**—ನಾನು ನಾಲ್ಕು ಸಲ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**—ಈ ಬಗ್ಗೆ ಉತ್ತರ ಕೊಡುವುದಕ್ಕೂ ಮಾನ್ಯ ಮಂತ್ರಿಗಳಿಗೆ ಶಕ್ತಿ ಇಲ್ಲ. ಅವರು ಇದಕ್ಕೆ ರಿಟನ್ ಸ್ಟೇಟ್‌ಮೆಂಟ್ ಕೊಟ್ಟೇ ಇಲ್ಲ. ಸುಮ್ಮನೆ ಬಂದು ಹೈಕೋರ್ಟ್‌ನಲ್ಲಿ ಇರುವುದರಿಂದ ಇದನ್ನು ಎತ್ತಬಾರದೆಂದು ಹೇಳಿ ಕಳಿಸಿಬಿಟ್ಟರು. ಅವರು ಏನು ಉತ್ತರ ಕೊಟ್ಟರು ?

ಅಧ್ಯಕ್ಷರು.—ನಾನು ೪ ಸಾರಿ ಅವಕಾಶ ಕೊಟ್ಟಿದ್ದೇನೆ. ಸಾರ್ವಜನಿಕ ಮಹತ್ವದ ವಿಷಯಂ ವಾದ್ದರಿಂದ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಉತ್ತರ ಬಂತೇ ? ತಮ್ಮ ಮಾತಿಗೆ ಮಾನ್ಯತೆ ಬಂತೇ ?

ಶ್ರೀ ಎನ್. ಧರ್ಮಸಿಂಗ್.—ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕೋ, ಸರ್ಕಾರದ ರಕ್ಷಣೆಗೆ ಹೋಗಬೇಕೋ ? ತಾವು ನಮಗೆ ರಕ್ಷಣೆ ಕೊಡಿ.

ಅಧ್ಯಕ್ಷರು.—ಈ ವಿಷಯದ ಬಗ್ಗೆ ನಾನು ತಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್.—ಏಕೆ ?

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಹುಡುಗರ ಜೊತೆ ಈ ರೀತಿ ರಾಜಕೀಯ ಮಾಡುವುದು ಬೇಡ. ಅವರಿಗೆ ಅನ್ಯಾಯವಾಗಬಾರದು.

SRI M. RAGUPATHI.—You go to seat. ಇದು ಬೇಡ ಮಾನ್ಯ ರಾಣೆಯವರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರಿಗೆ ಬೇಕು ಬೇಕಾದವರಿಗೆ ರೆಕಗ್ನಿಷನ್ ಕೊಡುತ್ತಾರೆ.

MR. SPEAKER.—Nothing will be recorded.

(INTERRUPTION)

ಶ್ರೀ ಎನ್. ಧರ್ಮಸಿಂಗ್.—ಅಧ್ಯಕ್ಷರೇ, ಒಂದು ವಿಷಯದ ಬಗ್ಗೆ.....

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್ ಅವರೇ, ನೀವು ಈಗ ಬಂದಿದ್ದೀರಿ. ನಿಮಗೆ ವಿಷಯ ಗೊತ್ತಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ನೀವು ಏನಂ ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ. ಈಗ ಈ ವಿಷಯ ಮುಕ್ತಾಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸದನದ ನಾಯಕರು ಇಲ್ಲೇ ಇದ್ದಾರೆ.

ಅಧ್ಯಕ್ಷರು.—ಈಗ ಮುಂದಿನ ಗಮನ ಸೆಳೆಯುವ ಸೂಚನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇವಲ ರಾಣೆಯವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಎಂದು ಹೇಳಿ.....

ಅಧ್ಯಕ್ಷರು.—ತಾವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ರೆಕಾರ್ಡ್‌ಗೆ ಹೋಗದಿದ್ದರೆ ನೀವಾದರೂ ಕೇಳಿ ಅಷ್ಟೇ ಸಾಕು.

ಅಧ್ಯಕ್ಷರು.—ನಾನು ಕೇಳಿದರೆ ಅದು ಪ್ರಯೋಜನವಾಗುವುದಿಲ್ಲ, ಅದು ರೆಕಾರ್ಡ್ ಆಗಬೇಕು. ಮಾನ್ಯ ನಾಯಕರವರೇ, ನೀವು ಏನೇ ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ಮಾನ್ಯ ಪ್ರಭಾಕರ್ ರಾಣೆಯವರು ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ತರಹ ಇಂಟರಪ್ಟ್ ಮಾಡುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ.—ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯಿದೆ ಸಚಿವರು ಸರಿಯಾಗಿ ಉತ್ತರ ಹೇಳಲಿದ್ದರೆ ಮುಂದಿನ ಸಾರಿ ಅದು ಚರ್ಚೆಗೆ ಬರುವ ಹಾಗೆ ಅವಕಾಶ ಮಾಡಿಕೊಡಿ. ಇಲ್ಲಿ ನಡೆಯತಕ್ಕ ಚರ್ಚೆಯನ್ನು ನಾಳೆ ಪತ್ರಿಕೆಗಳಲ್ಲಿ ಓದಿ ಜನ ನಮ್ಮನ್ನು ಕೇಳುತ್ತಾರೆ ರೈತರ ಬಗ್ಗೆ, ಕೂಲಿಕಾರರಿಗೆ ಕೂಲಿ ಸಿಗುವ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ೬೦–೭೦ ನಿಮಿಷ ಸಮಯವನ್ನು ಹಾಳು ಮಾಡುವುದು ಸರಿಯಲ್ಲ. ಸಭಾನಾಯಕರು ಉತ್ತರ ಹೇಳಲಿ, ಸಭೆಯ ಸಮಯವನ್ನು ವ್ಯರ್ಥ ಮಾಡುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ... ..

ಅಧ್ಯಕ್ಷರು.—ಈಗ ನಿಯಂಮ ೩೫ಳಿರ ಮೇರೆಗೆ ಮಾನ್ಯ ಕುಶಾಲ್‌ರವರಂ ಓದಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೆ, ಇದೇನಂ ಮುಂದಕ್ಕೆ .....

ಅಧ್ಯಕ್ಷರು.—ನಾನು ಈಗಾಗಲೇ ಮಾನ್ಯ ಕುಶಾಲ್‌ರವರನ್ನು ಕರೆದಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅದು ಹೇಗೆ? ಇನ್ನು ಕಾಲಿಂಗ್ ಅಟೆನೆಷನ್ ಇದೆ, ನಿಯಮ ೩೫ಳಿಕ್ಕೆ ಹೋದರೆ ಹೇಗೆ? ಗಲಾಟೆ ಮಾಡುತ್ತಿದ್ದಾರೆ...

ಅಧ್ಯಕ್ಷರು.—ನೀವು ಸುಮ್ಮನೆ ಕುಳಿತರೆ ನಾನೇನು ಮಾಡುವುದು?

ಶ್ರೀ ಸಿ. ಬೈರೇಗೌಡ.—ಗಲಾಟೆ ಯಾರಂ ಮಾಡುತ್ತಿದ್ದಾರೆ?

(ಗೊಂದಲ)

MR. SPEAKER.—That matter has been closed. Now Sri Narayana Kumar will speak.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ ಸ್ವಲ್ಪ ಕೇಳಿ.

ಅಧ್ಯಕ್ಷರು.—ಸ್ವಲ್ಪನೂ ಇಲ್ಲ ಏನೂ ಇಲ್ಲ.

ಶ್ರೀ ಜಿ. ನಾರಾಯಣಕಂಮಾರ್.—ಮಾನ್ಯ ಅಧ್ಯಕ್ಷರೆ.....

(ಗೊಂದಲ)

MR. SPEAKER.—The matter has been closed. Please resume your seats,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸಭೆಯಲ್ಲಿ ಮಂಖ್ಯಮಂತ್ರಿಗಳು ಇದ್ದಾರೆ. ಅವರು ಉತ್ತರ ಕೊಡುವುದಕ್ಕೆ ಸೌಜನ್ಯ ಇಲ್ಲವೆಂದರೆ ಏನು?

ಅಧ್ಯಕ್ಷರು.— ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸಂಬಂಧಪಟ್ಟ ಮಂತ್ರಿಗಳಿಂದ ಬಂದ ಉತ್ತರದಿಂದ ಸಮಾಧಾನವಾಗಿಲ್ಲ ಅಂದರೆ, ಮಂಖ್ಯಮಂತ್ರಿಗಳು ಸಭೆಯಲ್ಲಿರುವಾಗ...

(INTERRUPTION)

Do you want to suppress the Opposition?

(INTERRPUTION)

MR. SPEAKER.—Nothing wil go on rocord.

* * *

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ರಾಜಕೀಯಂ ಮಾಡುತ್ತಿದ್ದೀರಿ? ಪರ್ಮಿಷನ್ ಕೊಟ್ಟು ಪುನಃ ವಿತ್‌ಡ್ರಾ ಮಾಡಿಕೊಂಡಂ ರಾಜಕೀಯಂ ಮಾಡುತ್ತಿದ್ದೀರಿ.

MR. SPEAKER.—Nothing will go on record.

(INTERRUPTION)

ಅಧ್ಯಕ್ಷರು.—ನಾನು ನಾಲ್ಕು ಸಾರಿ ಅವಕಾಶ ಕೊಟ್ಟಿದ್ದೇನೆ. ಈಗಲಾದರೂ ಕಾಲಿಂಗ್ ಅಟೆನ್‌ಷನ್ ಕೇಳಿ. ಮೊದಲಿನ ಕಾಲಿಂಗ್ ಅಟೆನ್‌ಷನ್ ಮುಗಿದಿದೆ. ಬೇರೆ ಕಾಲಿಂಗ್ ಅಟೆನ್‌ಷನ್ ಕೇಳಿ. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. That matter has already been

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ಮೇಲಿನ ಭಾಷಣವನ್ನು ರಿಕಾರ್ಡ್ ಮಾಡಿಲ್ಲ.

closed ಎಂದು ಹೇಳಿದ್ದೇನೆ. ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ನಾನು ಏನು ಮಾಡಲಿ? I have given 4 times to ask clarifications.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏನು ಉತ್ತರ ಕೊಟ್ಟಿದ್ದಾರೆ?

ಶ್ರೀ ಧರ್ಮಸಿಂಗ್,—ಮಂತ್ರಿಗಳಿಗೆ ಸ್ವಲ್ಪ ಉತ್ತರ ಕೊಡಲಿಕ್ಕೆ ಹೇಳಿ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೆ ಅದು ಮುಗಿದಿದೆ. ನಾಲ್ಕು ಸಾರಿ ಅವಕಾಶ ಕೊಟ್ಟಿದ್ದೇನೆ. ಇವತ್ತು ಅಜೆಂಡಾದಲ್ಲಿ ಮಹತ್ವವಾದ ವಿಷಯಗಳು ಇವೆ. ಟೈಮ್ ಇಷ್ಟು ಹಾಳು ಮಾಡುವುದು ಸರಿಯಲ್ಲ The matter has been closed ಎಂದು ಹೇಳಿದ್ದೇನೆ, ನಾಲಕ್ಕು ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ನಾಲ್ಕು ಸಾರಿ ಅವಕಾಶ ಕೊಟ್ಟರೆ ಸಾಕಾಗುವುದಿಲ್ಲ. ನೀವು ನ್ಯಾಯ ಕೊಡುವ ಅವಕಾಶ ಮಾಡಿಕೊಡಬೇಕು.

೧೧-೩೦ ಎ. ಎಂ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಇಲ್ಲಿ ಕೇಳಿ.....

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಲ್ಲಿ ಸಭಾನಾಯಕರು ಇದ್ದಾರೆ. ಸಭಾನಾಯಕರು ಇದ್ದಂಥ ಕಾಲದಲ್ಲಿ.....

ಅಧ್ಯಕ್ಷರು.—ಇಲ್ಲಿ ನೋಡಿ ಈ ರೀತಿ ಇದೆ—(In Kaul and Shakdhar)

"No member can claim to speak as a matter of right. He should try to catch the Speaker's eye and wait for his turn. One who is called upon to speak is deemed to have caught the Speakar's eye. A member who tries to catch the Speaker's eye by shouting may not be called, So also a member who does not stick to his seat. A Member who is absent or inattentive and does and does not respond when called upon to speak loses his chance. One who is not called upon to speak has no right to protest against the decision of the Speaker."

ಶ್ರೀಮತಿ ನಾಗರತ್ನಮ್ಮನವರೇ, ಇಲ್ಲಿ ಸ್ವಲ್ಪ ಕೇಳಿ. ನಾಲ್ಕು ಸಲ ಅವರಿಗೆ ಅವಕಾಶ ಕೊಟ್ಟಿದ್ದೇನೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರ ಇಷ್ಟು ಮೊಂಡತನದಿಂದ ಉತ್ತರ ಕೊಡಬಾರದು. ಒಂದು ಕಡೆ ಆರ್ಡರ್ ಇಷ್ಯೂ ಮಾಡುತ್ತಾರೆ. ಮತ್ತೊಂದು ಕಡೆ ವಿತ್‌ಡ್ರಾ ಮಾಡುತ್ತಾರೆ. ಅಧ್ಯಕ್ಷರೇ, ತಾವು ಕೂಡ ಮಂತ್ರಿಯಾಗಿ ಕೆಲಸ ಮಾಡಿದವರು.....

(ಗೊಂದಲ)

ಅಧ್ಯಕ್ಷರು.—ನಾನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಆಮೇಲೆ ಇಲ್ಲಿಗೆ ಬಂದಿದ್ದೇನೆ. ನಾನು ಇಲ್ಲಿ ಮಂತ್ರಿಯಾಗಿ ಉತ್ತರ ಕೊಟ್ಟಿದ್ದೇನೆ. ನೀವು ಕೂಡ ಮಂತ್ರಿಯಾಗಿ ಉತ್ತರ ಕೊಟ್ಟಿದ್ದೀರಿ. ಯಾವ ಸದಸ್ಯರ ಪ್ರಶ್ನೆಗೂ ಕೂಡ ಅವರಿಗೆ ಬೇಕಾದಂಥ ಉತ್ತರವನ್ನು ಯಾವ ಸರ್ಕಾರವೂ ಕೊಡುವುದಿಲ್ಲ. ದಯವಿಟ್ಟು ಸಹಕಾರ ಕೊಡಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಈ ಸದನದ ಕಾರ್ಯ ಕಲಾಪಗಳು ನಡೆಯಬೇಕೋ ಬೇಡವೊ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಬೇರೆ ವಿಷಯಗಳಿಗೆ ತಾವು ಪರ್ಮಿಷನ್ ಕೊಡುತ್ತೀರಿ. ಆದರೆ ಈವಿಷಯಕ್ಕೆ.....

ಅಧ್ಯಕ್ಷರು.—ನೀವು ಈ ವಿಷಯವನ್ನು ಮತ್ತೆ ತೆಗೆಯಬೇಡಿ. The matter has been closed. ನನಗೆ ಹೇಳುವುದಕ್ಕೆ ಅಧಿಕಾರ ಇದ್ದಿದ್ದರೆ ಹೀಗೆಯೇ ಉತ್ತರ ಕೊಡಿ ಎಂದು ಹೇಳುತ್ತಿದ್ದೆ. ಇಡೀ ದೇಶದಲ್ಲಿ ಯಾರೇ ಸ್ಪೀಕರ್ ಹೀಗೆಯೇ ಉತ್ತರ ಕೊಡಿ ಎಂದು ಸರ್ಕಾರಕ್ಕೆ ಹೇಳಿಲ್ಲ. It is left to the Government to give reply.

ಶ್ರೀ ಎಸ್. ಬಂಗಾರಪ್ಪ.—ಕೆಲವು ಸಲ ತಮಗೂ ಕೂಡ ತೊಂದರೆಯಾಗುತ್ತದೆ ಎನ್ನುವುದು ಗೊತ್ತು. ಆದರೆ..... ...

ಅಧ್ಯಕ್ಷರು.—ಇದರ ಒಗ್ಗೆ ಮತ್ತೆ ಮಾತು ಬೇಡ. ದಯವಿಟ್ಟು ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ನೀವು ಪೋಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ.....

( ಗೊಂದಲ )

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ಸರ್ಕಾರಕ್ಕೆ ಛೀಮಾರಿ ಹಾಕಬೇಕು.

ಶ್ರೀ ಬಿ. ರಾಚಯ್ಯ.——ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಮಾಡುತ್ತಿದ್ದಾರೆ ಇವರು. ಉತ್ತರ ಸಮಾಧಾನಕರವಾಗಿಲ್ಲದಿದ್ದರೆ ಬೇರೆ ರೂಪದಲ್ಲಿ ಕೇಳಲಿ. ನಮಗೆ ಛೀಮಾರಿ ಯಾರೂ ಹಾಕಬೇಕಾಗಿಲ್ಲ.....

( ಗೊಂದಲ )

ಶ್ರೀ ಬಿ. ರಾಚಯ್ಯ.—ಉತ್ತರ ಕೊಟ್ಟಿದ್ದಾರೆ. ನಿಮಗೆ ಸಮಾಧಾನವಾಗದಿದ್ದರೆ ಕೋರ್ಟ್‌ಗೆ ಹೋಗಿ.

ಶ್ರೀ ಎಸ್. ಬಂಗಾರಪ್ಪ.—ಕೋರ್ಟ್‌ಗೆ ಹೋಗಿ ನಾವು ತೆಗೆದುಕೊಳ್ಳಬೇಕಾದರೆ ಸರ್ಕಾರ ಏಕೆ ಬೇಕು ?

( ಗೊಂದಲ )

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. Nothing will go on record.

xx xx xx

ಶ್ರೀ ಎಸ್. ಆರ್. ಬೊಮ್ಮಾಯಿ. —ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ವಿಷಯ ಹೈಕೋರ್ಟ್ ಮುಂದೆ ಇದೆ. ಆದ್ದರಿಂದ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕಿಂತ, ಮಂತ್ರಿಗಳ ಕಛೇರಿಯಲ್ಲಿ ಚರ್ಚೆ ಮಾಡುವುದು ಒಳ್ಳೆಯದು. ಅವರೂ ಕೂಡ ಬೇಕಾದರೆ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಈ ಸಭೆ ಮುಗಿದ ಮೇಲೆ ಇದರ ಬಗ್ಗೆ ಹೋಗಿ ಚರ್ಚೆ ಮಾಡಬಹುದು. ಸರ್ಕಾರಿ ಆಜ್ಞೆ ಹೊರಡಿಸಿ, ಹಿಂದೆ ತೆಗೆದುಕೊಂಡ ಉದಾಹರಣೆ ಇದೆ. ಮೊದಲನೇಯದೇನೂ ಅಲ್ಲ. ಸಾರ್ವಜನಿಕರ ಹಿತ ದೃಷ್ಟಿಯಿಂದ ಸರ್ಕಾರದಲ್ಲಿ ಆಜ್ಞೆಗಳು ಆಗುತ್ತದೆ. ಹಿಂದಿನ ಸರ್ಕಾರದಲ್ಲೂ ಕೂಡ ಈ ರೀತಿ ಆದ ನಿದರ್ಶನಗಳು ಇವೆ. ನಾನು ಒಂದು ಸಲಹೆ ಮಾಡುತ್ತೇನೆ. ಇದು ಹೈಕೋರ್ಟ್ ಮುಂದೆ ಇರುವ ಕಾರಣ ಇದರ ಬಗ್ಗೆ ಇಲ್ಲಿ ಹೆಚ್ಚು ಚರ್ಚೆ ಮಾಡುವುದು ಸೂಕ್ತ ವಲ್ಲ. ಈ ಸಭೆ ಮುಗಿದ ಮೇಲೆ ಮಂತ್ರಿಗಳು ಕರೆದಿದ್ದಾರೆ, ಅಲ್ಲಿ ಹೋಗಿ ಇದಕ್ಕೆ ಪರಿಹಾರ ಕಂಡು ಹಿಡಿಯಬಹುದು

---

* * * Not recorded as ordered by the Chair

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ತಾವು ಸರಿಯಾದ ಆಶ್ವಾಸನೆ ಕೊಡಿ. Why do you make it a prestige issue ?

SRI S. R. BOMMAI.—We are not making it a prestige issue.

ಶ್ರೀ ಆರ್. ವಿ. ದೇಶಪಾಂಡೆ.—ಅವರೇ ಆ ಟ್ರಸ್ಟ್‌ಗೆ ಚೇರ್ಮನ್ ಆಗಿದ್ದಾರೆ. He himself is the Trust Chairman. ಆದ್ದರಿಂದ ಮಂತ್ರಿಗಳ ಹತ್ತಿರ ಡಿಸ್‌ಕಸ್ ಮಾಡದೇ ಈ ರೀತಿ ವೆಲ್‌ನಲ್ಲಿ ಕುಳಿತು ಬಾ ಕ್ ಮಾಡುವುದು ಸರಿಯಲ್ಲ.

( ಗೊಂದಲ )

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಚರ್ಚೆ ಮಾಡುವುದು ಬೇಡ, ವಿಷಯ ಹೈಕೋರ್ಟ್ ಮುಂದೆ ಇದೆ. ಈ ಸಭೆ ಮುಗಿದ ಮೇಲೆ ಸಚಿವರು ಕರೆದಿದ್ದಾರೆ, ಅಲ್ಲಿ ಚರ್ಚೆ ಮಾಡೋಣ.

ಶ್ರೀ ಜೀವರಾಜ ಆಳ್ವ.—ಬೇಕಾದರೆ, ಈ ಸದನ ಮುಗಿದ ತಕ್ಷಣ ಚರ್ಚೆ ಮಾಡುತ್ತೇನೆ.....

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾನ್ಯ ಸಚಿವರು "ಬೇಕಾದರೆ" ಎಂದು ಹೇಳುತ್ತಿದಾರೆ. Are you not interested in the education of children ?

SRI JEEVARAJ ALVA.—I am very much interested. I reiterate whatever I have said earlier. It is a subjudice matter and I will discuss with the Hon'ble member.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಮಾನ್ಯ ಸಚಿವರು ಹೇಳಿದ್ದಾರೆ, ಇನ್ನು ಮುಂದೆ ಕಾಲಿಂಗ್ ಅಟೆನ್‌ಷನ್‌ಗೆ ಹೋಗೋಣ. still you are not convinced?.....

ಶ್ರೀಮತಿ ಮನೋರಮಾ ಮಧ್ವರಾಜ್ ಅವರೇ ತಾವು ಸರ್ಕಾರದ ಗಮನ ಸೆಳೆಯಿರಿ.

(ಖ) ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಂ ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತದಿಂದ ಖಾಸಗೀ ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಹಾನಿ ಉಂಟಾಗಿರುವ ಬಗ್ಗೆ

ಶ್ರೀಮತಿ ಮನೋರಮಾ ಮಂದ್ವರಾಜ್.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಸಮುದ್ರ ಕೊರೆತದಿಂದಾಗಿ ಸಾರ್ವಜನಿಕರ ಹಾಗೂ ಖಾಸಗಿ ಆಸ್ತಿಗಳಿಗೆ ಹಾನಿ ಉಂಟಾಗಿರುವುದರ ಬಗ್ಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಈ ನನ್ನ ಹೇಳಿಕೆ ಇಂಗ್ಲಿಷ್‌ನಲ್ಲಿ ಇದೆ, ಅದನ್ನು ಓದಲು ತಮ್ಮ ಅನುಮತಿಯನ್ನು ಕೋರುತ್ತೇನೆ. ನನಗೇನೂ ಇಂಗ್ಲಿಷ್ ಬಗ್ಗೆ ವ್ಯಾಮೋಹ ಇಲ್ಲ, ಆದರೆ ಹೇಳಿಕೆ ಇಂಗ್ಲಿಷ್‌ನಲ್ಲಿ ತಯಾರಾಗಿರುವುದರಿಂದ ಅದನ್ನು ಇಂಗ್ಲಿಷ್‌ನಲ್ಲಿ ಓದುತ್ತೇನೆ.

Karnataka State has a coastal line of 300 k.ms. broken up with number of river estuaries all along west coast. These rivers carry very heavy floods during monsoon. The erosion along the beaches has shifted river mouths and flood damages in the tidal reaches of rivers which are causing loss of valuable property which is of great concern to the State for the past few years. The following vulnerable reaches have been identified and remedial measures have evolved after conducting model studies by the Karnataka Engineering Research Station.